ವ್ಯವಹರಿಸದೇ ಇದ್ದ ಗ್ರಾಹಕರ ಪಟ್ಟಿ 'ಸಿ' ಗುಂಪಿನಲ್ಲಿತ್ತು. ಅದರಲ್ಲೂ ಎರಡು ಭಾಗಗಳಿರುವ ಸಾಧ್ಯತೆಯಿತ್ತು – ಕಳೆದೆರಡು ತಿಂಗಳಿಂದ ವ್ಯಾಪಾರವನ್ನೇ ಮಾಡದಿದ್ದ ಡಾರ್ಮೆಂಟ್ ಗ್ರಾಹಕರು – ಅವರು ಸದ್ಯಕ್ಕೆ 'ಸಿ' ಗುಂಪಿನ ಪಟ್ಟಿಯಲ್ಲಿದ್ದರೂ 'ಬಿ' ಗುಂಪಿಗೆ ಸೇರಿದವರೂ ಆಗಿದ್ದಿರಬಹುದು – ಅವರುಗಳ ಬಗ್ಗೆ ಶಿವಾನಿಗೆ ಮಾಹಿತಿಯಿರಲಿಲ್ಲ. ಮತ್ತೆ ಸುಜಾತಾ ಇದ್ದರೆ ಮಾತ್ರ ಸಂಸ್ಥೆಯೊಂದಿಗೆ ವ್ಯವಹರಿಸುತ್ತೇವೆಂದು ವಫಾದಾರಿ ತೋರಿಸುವ ಕಷ್ಟದ ಗುಂಪೂ ಇತ್ತು ಅವರುಗಳನ್ನು 'ಬಿ' ಮತ್ತು 'ಎ' ಗುಂಪಿಗೆ ವರ್ಗಾಯಿಸುವುದು ಎಲ್ಲಕ್ಕಿಂತ ದೊಡ್ಡ ಸವಾಲಾಗಿತ್ತು.

ಈ ಮಾತನ್ನು ಶಿವಾನಿ ಹೇಳಿದಾಗ ಅವಳ ದನಿಯಲ್ಲಿ ಒಂದು ಮಾಲೀಕತ್ವದ ಗತ್ತು ಇತ್ತು. ಚಿನ್ಮಯ–ಶಿವಾನಿ ಇಬ್ಬರೂ ಪ್ಯಾರಿಸ್ಸಿನಲ್ಲಿ ಜೊತೆಯಾಗಿ ಓದಿ ಭಾರತದಲ್ಲಿ ಒಂದು ಸ್ಟಾರ್ಟಪ್ ಮಾಡಬೇಕೆನ್ನುವ ಕನಸನ್ನು ಹೊತ್ತು ಬಂದಿದ್ದರು. ಒಬ್ಬರನ್ನೊಬ್ಬರು ಬಯಸಿ ಪ್ರೀತಿಸಿದ್ದವರು. ಮದುವೆಯಾಗಬೇಕೆಂದು ಬಯಸಿದ್ದವರು. ತಮ್ಮ ಸ್ಟಾರ್ಟಪ್ ಪ್ರಾರಂಭಿಸುವ ಮೊದಲು ಕೆಲದಿನಗಳ ಅನುಭವವಿರಲೆಂದು ಇಂಟರ್ನ್‌ಶಿಪ್ ಮಾಡಲು ಅನ್–ಆಕ್ಸೆಸರೀಸ್ ಗೆ ಬಂದಿದ್ದರು. ಹಾಗಿರುವಾಗ ಅದೇ ಸಂಸ್ಥೆಯನ್ನೇ ಆಕ್ರಮಿಸಿಕೊಳ್ಳಬಹುದೆನ್ನುವ ಸಂಗತಿ ಅಲ್ಲಿ ಕೆಲಸ ಮಾಡುತ್ತಿದ್ದಂತೆ ಶಿವಾನಿಗೆ ಮನವರಿಕೆಯಾಯಿತು. ಮತ್ತೆ ಹೊಸದಾಗಿ ಸಂಸ್ಥೆ ಹುಟ್ಟುಹಾಕುವುದಕ್ಕಿಂತ ಇರುವ ಸ್ಥಾಪಿತ ಸಂಸ್ಥೆಯನ್ನೇ ಟೇಕೋವರ್ ಮಾಡುವುದಕ್ಕೆ ಶಿವಾನಿಯ ತಂದೆ ಧನ (ಹಾಗೂ ಅದಕ್ಕಿಂತ ಹೆಚ್ಚಾಗಿ ಮನೋಬಲ ಹೆಚ್ಚಿಸುವ) ಸಹಾಯ ಮಾಡಿದರು. ಹೀಗಾಗಿ ಶಿವಾನಿ ಮತ್ತವಳ ತಂದೆಯ ಬಳಿ ಅನ್–ಆಕ್ಸಸರೀಸ್ ಡಿಸೈನ್ ಕಂಪನಿಯಲ್ಲಿ ಶೇಕಡಾ 75ರ ಪಾಲುದಾರಿಕೆಯಿತ್ತು. ಮಿಕ್ಕ ಕಾಲು ಭಾಗವನ್ನು ಸುಜಾತಾ ಹೊಂದಿದ್ದಳು. ಈಗ ಸಂಸ್ಥೆಯ ಮಾಲೀಕತ್ವವನ್ನಲ್ಲದೇ ಅದರ ದಿನನಿತ್ಯದ ನಿರ್ವಹಣೆಯನ್ನೂ ಕೈವಶ ಮಾಡಿಕೊಳ್ಳುವ ಅನೇಕ ಕ್ರಮಗಳನ್ನು ಶಿವಾನಿ ಕೈಗೊಂಡಿದ್ದಳು.

ಸ್ಟಾರ್ಟಪ್ ಆದರೆ ಸಮಾನ ಪಾಲುದಾರನಾಗಬಹುದೆಂದು ಕನಸು ಕಂಡಿದ್ದ ಚಿನ್ಮಯ ಈ ಎಲ್ಲ ಚದುರಂಗದಾಟದಲ್ಲಿ ಕೇವಲ ಒಂದು ಪೇದೆಯಂತೆ ತನ್ನ ಹೂಡಿಕೆಯೂ ಇಲ್ಲದೇ, ತನ್ನ ದನಿಯೂ ಇಲ್ಲದೇ ಮುಂದುವರೆದಿದ್ದ. ಅವನು ನೈತಿಕತೆಯ ದನಿಯೆತ್ತಿದ ಪ್ರತಿ ಬಾರಿಯೂ ಶಿವಾನಿ ವ್ಯಾಪಾರ ಧರ್ಮದ ಪಾಠವನ್ನು ಬೋಧಿಸುತ್ತಿದ್ದಳು. ಈಗ 'ಸಿ' ಗುಂಪಿನ ಗ್ರಾಹಕರಿಗೆಲ್ಲಾ ಮೊದಲಿಗೆ ಒಂದು ಪತ್ರ ಬರೆದು ಮೂಲಭೂತವಾಗಿ ತಮ್ಮ ಪರಿಚಯ ಮಾಡಿಕೊಂಡು, ಮುಂದಿನ ದಿನಗಳಲ್ಲಿ ಒಬ್ಬೊಬ್ಬರಿಗೂ ಸ್ವತಃ ಫೋನ್ ಮಾಡಿ ಹೊಸ ನಿರ್ವಹಣೆ ಮತ್ತು ಹೊಸ ತಂಡದ ಪರಿಚಯ ಕೊಡಬೇಕೆನ್ನುವುದು ಅವಳ ವಿಚಾರವಾಗಿತ್ತು. 'ಸಿ' ಗುಂಪಿನ ಪಟ್ಟಿಯಲ್ಲಿ 'ಅ'ಕಾರದಿಂದ ಆರಂಭವಾಗುವ ಅಖ್ತರ್ ಹುಸೇನನ ಹೆಸರು ಮೊದಲಿಗಿತ್ತು. ಪತ್ರ ಕಳುಹಿಸಿದ ಕೆಲವು ದಿನಗಳಲ್ಲಿ ಶಿವಾನಿಯೇ ಸ್ವತಃ ಫೋನ್ ಮಾಡಿ ಗ್ರಾಹಕರ ಸುಖದುಃಖಗಳನ್ನು ವಿಚಾರಿಸಬೇಕೆಂದುಕೊಂಡಿದ್ದಳು.

"ನೋಡು ಚಿನ್ನೂ ಈ ಸಂಸ್ಥೆಯನ್ನು ಪ್ರೊಫೆಷನಲ್ಲಾಗಿ ನಡೆಸಿ ಇ.ಆರ್.ಪಿ ಮತ್ತು ಕಸ್ಟಮರ್ ರಿಲೇಷನ್‌ಶಿಪ್ ಸಾಫ್ಟ್‌ವೇರ್ ಹಾಕಿದ್ದರೆ ನಮ್ಮ ಕೆಲಸ ಎಷ್ಟು ಸರಳವಾಗುತ್ತಿತ್ತು. ವಿ ವುಡ್ ಹ್ಯಾವ್ ನೋನ್ ದ ಟೈಪ್ ಆಫ್ ಕಸ್ಟಮರ್ಸ್ ಅಪ್‌ಫ್ರಂಟ್..." ಎಂದು ಶಿವಾನಿ ತನ್ನ ವೃತ್ತಿಪರತೆಯ ಜ್ಞಾನವನ್ನು ಪ್ರದರ್ಶಿಸಿದಳು. ಚಿನ್ಮಯ ಮೌನವಾಗಿದ್ದ.

★★★

ಹೋದ ಬಾರಿ ಮುಂಬಯಿಗೆ ಹೋಗಿದ್ದಾಗ ಸುಜಾತಾ ಮತ್ತು ಮುಕುಂದಸಾಗರನ ಪೆಂಟ್ ಹೌಸಿನ ಹೊರಭಾವಣೆಯಲ್ಲಿ ಒಂದು ಔತಣ ಕೂಟವನ್ನು ಆಯೋಜಿಸಿದ್ದಳು. ಅಖ್ತರನಿಗಾಗಿ ಆ ಔತಣಕೂಟ ಎಂದು ಅವಳು ಹೇಳಿದ್ದರೂ ಅವನು ನಿಮಿತ್ತಮಾತ್ರನಾಗಿದ್ದ. ಆ ಭಾವಣೆಯಿಂದ, ಆ ಎತ್ತರದಿಂದ, ಮುಂಬೈನ ಥಳುಕು ಬೆಳಕನ್ನು ಅಖ್ತರ ಆವಾಹಿಸಿದ್ದ. ಆ ಭಾವಣೆಯಿಂದ ಕೆಳಕ್ಕೆ ಬಿದ್ದು